ಅಂದರು ಡೇಸಿ. 'ನಿನ್ನ ಯಾವ ಸಾಕ್ಷಿಗಳೂ ಸರೀ ಇಲ್ಲ. ಇಲ್ಲಷ್ಟೇ ಅಲ್ಲ ನೀನು ಎಲ್ಲಿ ಹೋದ್ರುನೂ ನ್ಯಾಯ ಸಿಗೋದು ಕಷ್ಟ. ನಿನ್ನ ನೋಡಿದ್ರೆ ನಂಗೂ ಕರುಣೆ ಅನಸ್ತಿದೆ. ನಾಳೆ ನಂ ಎನ್‌ಜಿಓ ಕಡೆ ಬಾ, ನನ್ನ ಕಾರ್ಡು ಕೊಡ್ತೇನೆ. ನಿನಗೆ ಯಾವ ಕೆಲ್ಸದಲ್ಲಿ ಸ್ಕಿಲ್ ಇದೆ ನೋಡಿ ಒಂದು ಬದುಕೋ ದಾರಿ ಮಾಡಿಕೊಡ್ತೇನೆ' ಅಂದರು ರಜಿಯಾ. ಆದರೆ ಅಷ್ಟು ಕೇಳಿಕೊಳ್ಳುವ ಸಬೀನಾಗೆ ಒಂದೇ ಒಂದು ಸಾರಿ ಇಬ್ಬರನ್ನೂ ಸಮಕ್ಷಮ ಮಾತಾಡಿಸಿದರೆ ತಪ್ಪೇನು ಅನ್ನುವ ಯೋಚನೆ ಬಂದದ್ದೇ ನಾನು, 'ಮೇಡಂ, ನನಗ್ಯಾಕೋ ಕೇಸು ಕ್ಲೋಸ್ ಮಾಡುವ ಮೊದಲು ಒಂದೇ ಬಾರಿ ಮುಖಾಮುಖಿ ಆಗಿಸುವಾ ಅನಿಸ್ತಿದೆ. ಅವಳ ಬೇಡಿಕೆಗೂ ಒಂದು ಸಮಾಧಾನ ಸಿಕ್ಕು ನಂತರ ಅವರ ಸುದ್ದಿಗೆ ಹೋಗದೇ ತನ್ನದೇ ಬದುಕು ಕಟ್ಟಿಕೊಳ್ಳಲು ಮನಸ್ಸು ಗಟ್ಟಿಮಾಡಿಕೊಳ್ಳಬಹುದು' ಅಂದೆ. ಅದನ್ನು ಕೇಳಿದ್ದೇ ಮೇಡಂ ಸ್ವಲ್ಪ ಸಿಟ್ಟೇ ಆದ್ರು. 'ನೋಡಿ, ನೀವು ಲೇಖಕಿಯಾಗಿ ನಿಮ್ಮ ಕತೆಗಳಲ್ಲಿ ಪಾತ್ರಗಳನ್ನು ಮುಖಾಮುಖಿ ಮಾಡಬಹುದು ಆದರೆ ಇಲ್ಲಿ ಅವೆಲ್ಲ ನಡೆಯೊಲ್ಲ. ಕೌನ್ಸಿಲಿಂಗ್ ಮತ್ತು ತಪ್ಪು ಸರಿಗಳ ವಿಚಾರಣೆ ಅಷ್ಟೇ ನಮ್ಮ ಕೆಲಸ. ಕಾನೂನಿನ ಬೈಲಾ ಇನ್ನೊಮ್ಮೆ ಓದಿಕೊಳ್ಳಿ, ಜೊತೆಗೂಡಿಸಲು ಇದು ಫೆಮಿಲಿ ಕೋರ್ಟಲ್ಲ' ಅಂದರು. ನನಗೆ ಒಳಗೆಲ್ಲೋ ಚೂರು ಅವಮಾನ ಕಾಡಿದರೂ ನಾನು ತೋರಿಸಿಕೊಳ್ಳದೇ, 'ಆಯ್ತು ಮೇಡಂ, ನೀವಂದಂತೆಯೇ ಆಗ್ಲಿ' ಅಂದೆ.



ಸಬೀನಾ ಅಷ್ಟಕ್ಕೇ ಬಿಡದೇ ಈಗ ಅವರ ಕಾಲನ್ನೇ ಹಿಡಿದು ಅಳುತ್ತ, 'ಹಾಗನ್ಬೇಡಿ ಮೇಡಂ, ಹಮೀದ್ ನೋ ಅಂದರೆ ನೋ ಅಷ್ಟೇ. ನಾನು ಇಲ್ಲಿಂದ ಹೊರಟು ಹೋಗ್ತೇನೆ; ಮುಂದೆಂದೂ ಅವ್ರ ಬಳಿ ಸುಳಿಯೂದಿಲ್ಲ' ಅನ್ನುತ್ತಿದ್ದುದನ್ನು ಆಲಿಸಿದ ರಜಿಯಾ ಮತ್ತು ಡೇಸಿಯವರ ಮನಸ್ಸೂ ಕ್ಷಣಕ್ಷಣಕ್ಕೂ ಕರಗತೊಡಗಿತ್ತು. ಮೇಡಂ ಕೂಡ ಇದ್ದಲ್ಲೇ ಮೆತ್ತಗಾದರು. ನಮ್ಮ ಮೂವರನ್ನೂ ನೋಡಿದ ಮೇಡಂ, 'ಏನು ಮಾಡೋದ್ರೀ ಈಕೆಯ ಬೇಡಿಕೆ?' ಅಂದ್ರು. ರಜಿಯಾ ಅನುಮಾನಿಸುತ್ತ, 'ಯೋಚಿಸಬಹುದೇನೋ' ಅಂದರೆ ಡೇಸಿ, 'ಒಂದು ಅವಕಾಶ ಕೊಟ್ಟು ಮುಗಿಸಿ ಎದ್ದು ಬಿಡುವ' ಅಂದಿದ್ದರು. ಮೇಡಂ ಸಬೀನಾಗೆ ಎದುರಿನ ಕುರ್ಚಿಯಲ್ಲಿ ಕೂಡಲು ತಿಳಿಸಿ, ಬೆಲ್ ಮಾಡಿ ಸಿದ್ದುವನ್ನು ಕರೆದು ಹೊರಗಡೆ ವೇಟಿಂಗ್ ರೂಮಲ್ಲಿ ಹಮೀದ್ ಇದ್ದಾರೆ, ಕರೆದು ತಾರಪ್ಪ' ಅಂದರು. ಎಲ್ಲ ಮುಗಿದು ಇನ್ನೇನು ಕೇಸ್‌ನಲ್ಲಿ ಅಟೆಂಡ್ ಆಗಿದ್ದಕ್ಕೆ ಸಹಿ ಪಡೆಯಲು ಕರೆದಿದ್ದಾರೆ ಅಂತ ತಿಳಿದ ಹಮೀದ್ ನಸುನಗುತ್ತಲೇ ಒಳಬಂದವ ಪಕ್ಕದಲ್ಲಿ ಕೂತಿದ್ದ ಸಬೀನಾಳನ್ನು ಕಂಡು ಬಂದಷ್ಟೇ ವೇಗದಲ್ಲಿ ಹೊರ ಓಡಿಬಿಟ್ಟಿದ್ದ. 'ನೋಡು ಸಬೀನಾ ಅವನಿಗೆ ನಿನ್ನ ಮುಖ ನೋಡಲೂ ಮನಸ್ಸಿಲ್ಲ. ನೀನು ನೋಡಿದರೆ ಮದುವೆಯವರೆಗೂ ಮಾತಾಡುತ್ತೀ' ಅಂದರು. ಒಳ ಬಂದು ಹೋದ ವ್ಯಕ್ತಿಯನ್ನು ಸಬೀನಾ ಗಮನಿಸದೇ 'ಎಲ್ಲಿ ಬಂದು ಹೋದರು? ಎಲ್ಲಿ? ಎಲ್ಲಿ?' ಅನ್ನುತ್ತ ಎದ್ದು ನಿಂತಳು.

ಮೇಡಂ ಇನ್ನೊಮ್ಮೆ ಸಿದ್ದುವನ್ನು ಕರೆದು, 'ಹೋಗಪ್ಪ, ಹಮೀದ್ ಅವರನ್ನು ಇನ್ನೊಮ್ಮೆ ಹಿಡಿದು ತಾ' ಅಂದರು. ಮುಂದಿನ ಹತ್ತು ನಿಮಿಷ ಕಳೆದರೂ ಸುದ್ದಿಯೇ ಇಲ್ಲ. ಆಗಲೇ ಶಶಿರೇಖಾರನ್ನು ಉದ್ದೇಶಿಸಿ ಡೇಸಿ, 'ವಿಕಾಸ ಸೌಧಕ್ಕೆ ನಾವು ತರಬೇತಿಗೆ ಹೋದ ಬಸ್ ಚಾರ್ಜ್, ಟಿಎ.ಡಿಎ ಬಿಲ್ ಸ್ಯಾಂಕ್ಷನ್ ಆಗಿ ಬಂತೇ?' ಕೇಳಿದರು. 'ಹೌದು ಅದೊಂದು ಬಾಕಿ ಉಳಿಯಿತಲ್ಲ ಶಶಿರೇಖಾ?' ಅಂದ್ರು